(ಇಂದು ದಿನಾಂಕ 19-07-2018 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಎನ್.ಎಂ.ಎನ್. ವಕೀಲರಿಂದ**

ನಾನು ಈ ಪ್ರಕರಣದಲ್ಲಿ ವಾದಿ ಇದ್ದು, ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ಈಗಾಗಲೇ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

| | |
|---|---|
| ನಿಶಾನೆ ಪಿ 1 | ಃ ಸ.ನಂ. 1481/2 ಗೋಕರ್ಣ ಗ್ರಾಮದ ಪಹಣಿಪತ್ರಿಕೆ |
| ನಿಶಾನೆ ಪಿ 2 | ಃ ಎಂ.ಇ. ನಂ. 2429 ಇದರ ದೃಢೀಕೃತ ನಕಲು |
| ನಿಶಾನೆ ಪಿ 3 | ಃ ಎಂ.ಇ. ನಂ. 441 ಇದರ ದೃಢೀಕೃತ ನಕಲು |
| ನಿಶಾನೆ ಪಿ 4 | ಃ ಎಂ.ಇ. ನಂ. 4179 ಇದರ ದೃಢೀಕೃತ ನಕಲು |
| ನಿಶಾನೆ ಪಿ 5 | ಃ ಮೂಲ ದಾವೆ ನಂ. 55/2003 ರ ಅಂತಿಮ ರಾಜಿ ಡಿಕ್ರಿಯ ದೃಢೀಕೃತ ಪ್ರತಿ |
| ನಿಶಾನೆ ಪಿ. 6 | ಃ ನನ್ನ ತಂದೆಯ ಮರಣ ಪ್ರಮಾಣಪತ್ರದ ದೃಢೀಕೃತ ಪ್ರತಿ |

(ಮೃತ್ಯುಪತ್ರ ದಿನಾಂಕ 21-04-1989 ರ ಅಸಲು ಪ್ರತಿಯನ್ನು ಹಾಜರಪಡಿಸಿದ್ದು ಸದ್ರಿ ದಾಖಲೆಯ ಸಾಕ್ಷಿದಾರರ ಮುಖೇನ್ ನಿಶಾನೆಗೊಳಪಡಬೇಕಾದ ಕಾರಣ ಸದ್ರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಲ್ಲ.)

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಿವಿಲ್ ಜಡ್ಜ ಕುಮಟಾ